Regd No M 1299 SATYAVADI Found

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂವತ್ಸರ 31 ಸಂಚಿಕೆ 97] ಶನಿವಾರ 14—2—48 [ಬಿಡಿ ಪ್ರತಿ 3 ಪೈ

ಬಾಪೂಜಿ

ಶ್ರೀ ಗಾಂಧೀಜೀ ನಾವು ಕಣ್ಣು ತೆರೆಯುವಂತೆ ಮಾಡಿದನು. ನಮ್ಮೊಳಗೆ ನಮ್ಮ ಪರಿವರ್ತನವನ್ನು ತರಬಲ್ಲವನಾದನು. ಆದರೆ ತದಕ್ಕಾಗಿ ನಾವು ಅತನನ್ನು ಹೋಗೊಡಿಸಿಕೊಳ್ಳಬೇಕಾದ್ದು ಮಹಾ ದುರ್ದೈವವು. ಚರಿತ್ರೆಯು ನಮಗೆ ಒಂದು ಪಾಠವನ್ನು ಕಲಿಸಿತಾಗಲಿ ಅದಕ್ಕೆ ನಾವು ಪಲ್ಲಿಸಿದ ಬೆಲೆಯು ಅತಿ ಹೆಚ್ಚಿನದ ಈ ಯುಗದ ದೌರ್ಭಾಗ್ಯವು ಇದು. ಜೈ ಹಿಂದ್

ಮಹಾತ್ಮನ ಸಾವಿಗೆ ಕಾರಣವೇನು ?

ಮತಮೌಢ್ಯ, ಮತದುರಹಂಕಾರ, ಅಪಪ್ರಚಾರ ಮಾಡಿದ ಮತ ಮೂಢರು. ಇದಕ್ಕೆ ಬೆಂಬಲ ಕೊಟ್ಟ ಆಂಗ್ಲ ಸಾಮ್ರಾಜ್ಯವಾದಿಗಳು. (ಜ್ವಾ)

ಮಹಾತ್ಮನನ್ನು ಸಾಯಿಸಿದ್ದರಿಂದ ಏನಾಯಿತು ?

ಅತನ ಸೂತ್ರಗಳನ್ನೂ, ಬೋಧೆಗಳನ್ನೂ ಸಾಯಿಸಬಲ್ಲರೇ ? ಬೀಜವು ಮಹಾವೃಕ್ಷವಾಗಿದೆ ತಾಯಿ ಜೇಳಿನ ಹೊಟ್ಟೆಯು ಒಡೆಯಿತು ಆದರೆ ಅವನ ಬೋಧೆಗಳು ಮುತ್ತಷ್ಟು ತೇಜಸ್ಸಿನಿಂದಿಗೆ ಬೆಳಗಲಾರಂಭಿಸಿವೆ (ಜ್ವಾ)

ಸಂಧಿಯಿದರಿಂದ ಪ್ರಪಂಚವು ಕಲಿಯ ಬೇಕಾದ ವಿಷಯಗಳು

ಬಹ್ಮಚರ್ಯ, ಅಸ್ಪೃಶ್ಯತೆಯನ್ನು ಶೇಷಿಸದೇ ಇರುವಿಕೆ, ನಿರಂತರ ಪ್ರಜಾ ಸೇವೆ, ವಿದ್ಯಾನಿಷೇಧ ಪ್ರಕೃತಿ ವೈದ್ಯದ ಪಾವನತೆ ಇತ್ಯಾದಿ

ಗಾಂಧಿಯವರ ಅಮರ ಸಂದೇಶ

ಸ್ವಾರ್ಥವನ್ನು ತ್ಯಜಿಸಿ, ಜನಹಿತವನ್ನು ಲಕ್ಷಿಸಿ. ವ್ಯಾಮೋಹನನ್ನು ತ್ಯಜಿಸಿ. ನವಭಾರತ ನಿರ್ಮಾಣ. ನವಭಾರತ ನಿರ್ಮಾಣವನ್ನು ಮಾಡಿರಿ. ಇದು ಇನ್ನು ಮುಂದೆ ನಿರಂತರ ಕ್ರಿಯಾಗಿರತಕ್ಕ

ಮದರಾಸು ಯುವಕನು ನೇಣು ಹಾಕಿಕೊಂಡನು

ಮೈಸೂರು ಸಿಟಿ ಕೋಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ 15-2-48 ನೇ ಭಾನುವಾರ ಸಾಯಂಕಾಲ 5-30 ಗಂಟೆಗೆ ಬ್ಯಾಂಕು ಹಾಲಿನಲ್ಲಿ ಶ್ರೀಮಾನ್ ಟಿ ಗುಂಡಪ್ಪ ಬಿ ಎ. ಬಿ. ಎಲ್, ರವರ ಅಧ್ಯಕ್ಷತೆಯಲ್ಲಿ ' ಸಹಕಾರ ಸಂಘಗಳಲ್ಲಿ ಉಚಿತವಾದ ಸೇವೆಯ ಪದ್ಧತಿಯು ತಪ್ಪಿದ ಹೊರತು ಸಹಕಾರವು ಮುಂದುವರಿಯಲಾರದು ' ಎಂಬ ವಿಷಯವಾಗಿ ಚರ್ಚಾಕೂಟವನ್ನು ಏರ್ಪಡಿಸಿತ್ತು. ಸರ್ವರೂ ದಯವಾಡಿಸಿ ಬೇಕಾಗಿ ಪ್ರಾರ್ಥನೆ ಎಂದು ಗೌರವ ಕಾರ್ಯದರ್ಶಿಗಳು ಕೋರುತ್ತಾರೆ.

ಮದರಾಸು, ಫೆ 13 — ' ಮಹಾವ್ಯಕ್ತಿ ಹೊಂಟು ಹೋದನು. ಇದೇ ಕಡೆಯ ದಿವಸ. ನಾನು ಬಾಪೂಜಿಯನ್ನು ಸೇರುತ್ತೇನೆ ಎಂಬುದಾಗಿ 3 ಕಾಗದಗಳನ್ನು ಬರೆದಿಟ್ಟು, 30 ವರ್ಷ ವಯಸ್ಸಿನ ನಾರಾಯಣ ಎಂಬುವವನು ನೇಣು ಹಾಕಿಕೊಂಡು ಪ್ರಾಣಬಿಟ್ಟನು ಗಾಂಧೀಜೀ ಭಾವಚಿತ್ರಕ್ಕೆ ಪೂಜೆಯನ್ನು ಮಾಡಿ, ಹಣೆಗೆ ಕುಂಕುಮವನ್ನಿಟ್ಟುಕೊಂಡಿದ್ದನು. ಆತ ವಂಗಳೂರಿನವನು ಜಾರ್ಜ್‌ಟವನ್ ಇಜ್ಜಲು ದಿವೋ ಸೇವಕನಾಗಿದ್ದನು. ವೋಲೀಸರಿಗೆ, ತನ್ನ ವ್ಯವಸ್ಥಾಪಕರಿಗೆ ಮತ್ತು ಸ್ತ್ರೀಗೆಳತಿಯೊಬ್ಬಳಿಗೆ ಆತ ಕಾಗದ ಬರೆದಿಟ್ಟಿದ್ದು. ಪಾದಿ ಜುಬ್ಬ ಮತ್ತು ಧೋತಿ ಧರಿಸಿ ಆತ ಸತ್ತಿದ್ದನು ಪಾದ ಅರಿವೆ ಸಮೇತ ತನ್ನ ಸಂಸ್ಕಾರ ವಾಗಬೇಕೆಂದು ಆತ ಬರೆದಿಟ್ಟಿದ್ದಾನೆ.

ಮದರಾಸಿನಲ್ಲಿ ಗಾಂಧೀಜೀ ಅಸ್ಥಿಸಂಚಯನವನ್ನು ನೋಡಲು ಹೋಗಿದ್ದ ಕಾಲದಲ್ಲಿ ರಾಯಪೇಟಾದಲ್ಲಿನ ಗೃಹವೊಂದರಿಂದ 13 ಸಾವಿರ ರೂ. ಬೆಲೆ ಬಾಳುವ ಆಭರಣವನ್ನು ಕಳವು ಮಾಡಲಾಗಿತ್ತು.

ನಾಗಪುರದಲ್ಲಿ ಡಾ। ಖಾರೆಯವರ ಗೃಹ ಶೋಧನೆಯಾಯಿತು.

ಗಾಂಧೀಜಿ ಕೊಲೆ ಒಗ್ಗೆ ವಿಚಾರಣೆ ನಡೆಸಲು ವಿಶೇಷ ನ್ಯಾಯಾಸ್ಥಾನ ಆರಂಭಿಸಲು ಅಗತ್ಯ ಶಾಸನ ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಬಂಲಿದೆ

ಗಾಂಧೀಜೀ ಕೊಲೆ ಮೊಕದ್ದಮೆಯಲ್ಲಿ ಬಾಂಬೆಸೆದ ಮದನಲಾಲ್ ಅಪ್ರೂವರ್ ಆಗುವನೆಂದ ತಿಳಿದುಬಂದಿದೆ

ಹೈದರಾಬಾದು ಸಂಸ್ಥಾನ ಸೇನೆಯ ಹಿರಿಯ ಅಧಿಕಾರಿ 38 ವಯಸ್ಸಿನ ಆಂಗ್ಲೋ ಇಂಡಿಯನ್ ಜಾತಿಯ ಮೇಜರ್ ಲ್ಯಾಂಗ್ ಗುಂಪಿನವರ ದಾಂಧಲೆಗೀಡಾಗಿ ಸತ್ತರು.

ಅವರು ಪಕ್ಷಿಗಳನ್ನು ಬಂದೂಕಿನಿಂದ ಹೊಡೆಯುತ್ತಿದ್ದಾಗ ಸ್ತ್ರೀಯೊಬ್ಬಳಿಗೆ ಅಕಸ್ಮಾತ್ ಸ್ವಲ್ಪ ಪಟ್ಟು ಬಿದ್ದಿತು. ಅಕೆ ಆತನಾದ ಎಂಬಿದಳ. ಜನರು ನುಗ್ಗಿ ಮೇಜರ್‌ನನ್ನು ಕೊಂದರು.

ಕೊಚ್ಚಿನ್ ಸಂಸ್ಥಾನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಅಕ್ರಮಕೂಟ ಎಂದು ಸಾರಲಾಗಿದೆ

ಅಖಿಲ ಭಾರತ ಹಿಂದೂ ಮಹಾಸಭೆ ರಾಜಕೀಯ ಜಾಗೃತಿಯನ್ನು ರದ್ದುಪಡಿಸಬೇಕೆಂಬ ಬಂಗಾಳ ಪ್ರಾಂತೀಯ ಮಹಾಸಭೆಯ ಸಮಿತಿ ಸಲಹೆಯನ್ನು ಡಾ || ಶ್ಯಾಮಪ್ರಸಾದ ಮುಖರ್ಜಿ ಬೆಂಬಲಿಸಿದ್ದಾರೆ.

ಗೋ ವಧೆ ನಿಲ್ಲಲಿ

Save the Cow

Edited, Printed and Publishd by M S Krishna Rao at the Satyavadi Press Chamaraja

ಹುಡುಗಿಯರನ್ನು ಓಡಿಸಿಕೊಂಡು

ಹೋಗುವುದು ಒಂದು ಆಟ

ಪಾಕಿಸ್ತಾನ ಸರದಾರರ ಪಾತವಿ ಕೃತ್ಯ

ಈಗ ಪಾಕಿಸ್ತಾನದವರು ನಡೆಸಿರುವ ಧರ್ಮ ಯುದ್ಧದಲ್ಲಿ ಮುಖ್ಯವಾದ ತತ್ವ ಸತತವಾದ ಲಕ್ಷಣವೇನೆಂದರೆ ಹುಡುಗಿಯರ ಬೇಟೆ ಎಂದು ಟ್ರಿಬ್ಯೂನು ಪತ್ರಿಕೆಯು ಬರೆಯುತ್ತಾ ಹೇಳುವ ದೇನೆಂದರೆ—

ಮೊದಲು ಈ ಧರ್ಮ ಯುದ್ಧವು ಪಂಜಾಬಿನ ರಾವಲಪಿಂಡಿ ಮುಲ್ತಾನು ಪ್ರದೇಶಗಳಲ್ಲಿ ಸಾರಲ್ಪಟ್ಟಾಗ ಅಲ್ಲಿ ಕ್ಷೌರಿಯಿಂದಿದ್ದ ಮತ್ತು ಲಕ್ಷಣ ಇಲ್ಲದ ಸಿಕ್ ಹಿಂದೂ ಜನರನ್ನು ತಡವಿ ಸಂಖ್ಯಾ ಬಲದಿಂದಲೂ ಶಸ್ತ್ರಾಸ್ತ್ರಗಳಿಂದಲೂ ಅವರನ್ನು ಹಿಮ್ಮೆಟ್ಟಿ ಅವರಲ್ಲಿದ್ದ ಹುಡುಗಿಯರ ಬೇಟೆಯಾಡುವುದೊಂದು ಶೌರ್ಯದ ಕೃತಿಯೆಂದು ತೋರಿಸುವುದು ತಲೆತಿರುಕ ಲೀಗಿನ ಜನರ ಕೆಲಸವಾಗಿದ್ದಿತು! ಸುಲಿಗೆ ಮಾಡಿದ ಮತ್ತು ಹಾಳಾದ ಹಳ್ಳಿಗಳ ಹೆಂಗಸರನ್ನೆಲ್ಲ ಒಂದು ಕಡೆ ಕೂಡಿಸಿ ಅವರಲ್ಲಿ ಮುದುಕಿಯರನ್ನೂ ಮಧ್ಯವಯಸ್ಸಿನವರನ್ನೂ ರೋಗಿ ಕರೂಪಿ ಹೆಂಗಸರನ್ನೂ ಆರಿಸಿ ತೆಗೆದು ಅವರನ್ನೆಲ್ಲಾ ಓಡಿಸಿ ಬಿಡುವರು, ಇಲ್ಲವೇ ನಿಗಚಿ ಓಡುವರು. ಉಳಿದ ತರುಣ ಮತ್ತು ಸುಂದರ ಹುಡುಗಿಯರನ್ನು ಸಾಲಾಗಿ ನಿಲ್ಲಿಸಿ, ಧರ್ಮರಾಜ್ಯವನ್ನು ಕಟ್ಟಿದ ಈ ಶೂರರು ತಮಗೆ ಬೇಕಾದವರನ್ನು ಆರಿಸಿಕೊಂಡು ಹೋಗುವರು. ದುಃಖ ಮತ್ತು ಭಯದಿಂದ ಗಾಬರಿಗೊಂಡ ಈ ಅಸಹಾಯ ಹುಡುಗಿಯರನ್ನು ಈ ನೀಚರು ಕೊಳ್ಳುವ ದನಗಳನ್ನು ಪರೀಕ್ಷಿಸುವಂತೆ ತಮ್ಮ ಪಾಪಿ ಕೈಗಳಿಂದ ಮುಟ್ಟಿ ನೋಡಿ ಅವರನು ಕತ್ತೆ ಕುದುರೆ ಅಥವಾ ಒಂಟೆಯ ಮೇಲೆ ಹೇರಿಕೊಂಡು ಹೋಗುವರು. ಒಮ್ಮೊಮ್ಮೆ ಈ ತರುಣಿಯರನ್ನೆಲ್ಲಾ ದಿಗಂಬರರನ್ನಾಗಿ ಮಾಡಿ ಮೆರವಣಿಗೆ ಮಾಡಿಸಿ ಈ ಜಯಶಾಲಿ ಧರ್ಮಯೋಧರು ತಮ್ಮ ಮನಸ್ಸಿಗೆ ಬಂದಂತೆ ತಮ್ಮ ಕಾಮೇಚ್ಛೆ ಪೂರೈಸಿಕೊಂಡು ಆ ಮೇಲೆ ತಮ್ಮ ಗುಪ್ತಸ್ಥಳಕ್ಕೆ ಕರೆದುಕೊಂಡು ಹೋಗುವರು.

ಧರ್ಮಸಮ್ಮೇಳನ

ಕುಂಭಾಮೇಲಾ ಸಂತೆ ಝಾಸಿ ಫೆ 11

ಅಖಿಲ ಭಾರತ ಗೋತಕ್ಷಣಾ ಸಮ್ಮೇಳನವು ತಾ || 9 ಮಧ್ಯಾಹ್ನ ಅಲಹಾಬಾದು ಧರ್ಮಸಗದಲ್ಲಿ ಪಂ || ಮಾಧವಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸ್ವಾಮಿ ಕರಪಾತ್ರಜೀ ಯುವರೂ ಮಿತ್ತರರೂ ಸ್ಫೂರ್ತಿದಾಯಕ ಭಾಷಣ ಮಾಡಿದರು. ಸಂಜೆ ಧರ್ಮವೀರ ದಳದ ಸಮ್ಮೇಳನವು ಶ್ರೀ ದ್ವಾರಕಾ ಪೀಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ತಮ್ಮ ಹೃದಯಂಗಮ ಭಾಷಣದಲ್ಲಿ ಧರ್ಮವೀರದಳಕ್ಕೆ ಸೇರಿ ಧರ್ಮಯುದ್ಧವು ವಿಜಯಿಯಾಗಲು ಸಹಕರಿಸಬೇಕೆಂದು ವಿನಂತಿಸಿದರು.

ಜ್ಯೋತಿಷ್ಪೀಠದ ಮತ್ತು ಶಾರದಾ ಪೀಠದ ಜಗದ್ಗುರು ಮಹಾರಾಜರುಗಳನ್ನು ತ್ರಿವೇಣಿ ಸ್ನಾನಕ್ಕೆ, ಅಶ್ವ ಮತ್ತು ಕಾಲ್ನಾಳು ಪೋಲೀರು ಮಹಾಶರುಗಳು ಮತ್ತು ಲಕ್ಷಾಂತರ ಜನರಿಂದ ಕೂಡಿದ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಧರ್ಮಸಂಘದ ಮಹಿಳಾ ಸಮ್ಮೇಳನವು ತಾ|| 10 ಮಂಗಳವಾರ ನಡೆಯಿತು. ಅನೇಕ ಮಂದಿ ಮಹಿಳೆಯರು ಫಗವಾದ ವಾಗ್ಝರಿಯಿಂದ ಉಪನ್ಯಾಸ ಭಾಷಣ ಮಾಡಿದರು ಧರ್ಮಸಂಘದ ತಿಕ್ಷಕ ಮಂಡಲ ಸಮ್ಮೇಳನವು ತಾ || 10 ಸಂಜೆ ಶ್ರೀ ದ್ವಾರಕಾ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರ ಮತ್ತಿತರ ವಿದ್ವಾಂಸರ ಭಾಷಣಗಳೂ ಮತ್ತು ಒಂದು ಮುಖ್ಯ ಠರಾವಿನ ಮಂಜೂರೂ ಆದನಂತರ ಸಮ್ಮೇಳನವು ಪರಿಸಮಾಪ್ತವಾಯಿತು

ಶ್ರೀ ದ್ವಾರಕಾ ಜಗದ್ಗುರುಗಳು ಈ ದಿವಸ ಕಾಶಿಗೆ ಪ್ರಯಾಣ ಬೆಳೆಸಿ, ತಾ|| 14 ರಲ್ಲಿ ಇಲ್ಲಿಗೆ ವಾಪಸ್ ಬಂದು, ತಾ|| 17 ರಲ್ಲಿ ವಿಮಾನದಲ್ಲಿ ಒಡೋಢಾಕ್ಕೆ ಪ್ರಯಾಣ ಬೆಳೆಸುವರು.

ಅ ಮೋ ಘ ಪ್ರಾ ರಂ ಭ

ಅತ್ಯಾಧುನಿಕ ಯಂತ್ರೋಪಕರಣಗಳಿಂದಲೂ ಸುಘಾಸನಗಳಿಂದಲೂ ಸಜ್ಜುಗೊಳಿಸಿರುವ

ರಾಜಧಾನಿಯ ಆಧುನಿಕ ಚಲನ ಚಿತ್ರ ಮಂದಿರ

ಪ್ರ ಭಾ ಪಿಕ್ಚರ್ ಹೌಸ್

15—2—48 ರಿಂದ .... ದಿನವಹಿ 3 ಆಟಗಳು

ಭರಣಿಯವರ ರ ತ್ನ ಮಾ ಲ (ತೆಲಗು)

ತಾರಾಗಣ : * ಭಾನುಮತಿ * ಸಿ. ಎಸ್. ಆರ್ * ಹೇಮಲತಾ * ಡಾ || ಸುಬ್ಬರಾವ್

ಮೈಸೂರು ಸಂಸ್ಥಾನದ ಕೈಗಾರಿಕಾ ಮತ್ತು ಆರ್ಥಿಕ ಸಚಿವರಾದ ಶ್ರೀಮಾನ್ ಹೆಚ್. ಸಿ. ದಾಸಪ್ಪ ಅವರು ಪ್ರಾರಂಭೋತ್ಸವ ನೆರವೇರಿಸಲು ದಯವಿಟ್ಟು ಒಪ್ಪಿರುತ್ತಾರೆ

Sri Krishnarajendra Mills Ltd., Mysore

Notice

Interim Dividend for the half year ended 31 st December 1947

At the Meeting of the Board of Directors held on 25 th January 1948, the Directors have resolved to pay an interim dividend at the rate of Rs. 1-8-0 and a bonus of 8 annas on each share, both free of Myso e incometax, for the period of six months ended 31 st December 1947.

The transfer books of the Company will be closed from 24 th to 28 th March 1948, both days inclusive.

The interim dividend and bonus warrants will be posted on and after 15 th April 1948 to all shareholders whose names stand on the Register of Members of the Company on 24 th March 1948.

By Order of the Board
B. S. Visweswaraiya
Secretary

Mysore
25 th Jan. 1948

Woodlands

From 13—2—48

Federal Operator 9

A must-be-seen Picture
holds you spell bound
from start to fi
Daily 3 Shows
.....

Morning Shows at 10-3
For 4 Days From 13—2-

Jungle Devils

— with —
Herman Brix — Mala

At Opera

ಯಶಸ್ವಿ 3 ನೇ ವಾರ
ಕನ್ನಾಂಬಾ, ಚಿನ್ನಪ್ಪ
ಕೃಷ್ಣ, ಮಧುರಂ
ಪಾತ್ರವಹಿಸಿರುವ
ರ ನ

Morning Shows fro
In ad th

ಶಕ್ತಿಸುಧಾ

ಸಂಜೀವನ

SHAKTI SUDHA

A Superb TONIC